ಆರೋಪಿಯ ಸುಳಿವು ಸಿಗದೆ ಪೊಲೀಸ್‌ರಿಗೆ ಏನು ಮಾಡಬೇಕೆಂಬುದೇ ತಿಳಿಯದಾಯಿತು. ಅತ್ತ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನಾಕಾರರಿಂದ 'ವಿ ವಾಂಟ್ ಜಸ್ಟೀಸ್..ವಿ ವಾಂಟ್ ಜಸ್ಟೀಸ್... ಶಶಿರೇಖಾಳ ಸಾವಿಗೆ ನ್ಯಾಯ ಸಿಗಲೇಬೇಕು' ಎನ್ನುವ ಘೋಷಣೆಗಳು ಕೇಳುತ್ತಿದ್ದರೆ, ಇತ್ತ ಆರೋಪಿ ಸಿಗದೆ ಪೊಲೀಸರಿಗೆ ತಲೆನೋವಿನ ವಿಷಯವಾಗಿತ್ತು. ಈಗಾಗಲೇ ಪ್ರತಿಭಟನೆ ಶುರುವಾಗಿ ತಿಂಗಳುಗಳೇ ಕಳೆದಿದ್ದವು. ಕೊನೆಗೆ ಸುಭಾಷನಿಗೆ ಅದಾವ ಸುಳಿವು ಸಿಕ್ಕಿತೋ..? ಒಂದು ದಿನ ಪಂಜಾಬಿನ ಗಡಿ ಹಳ್ಳಿಯಲ್ಲಿ ಅಡಗಿದ್ದ ಆರೋಪಿ ಚಂದ್ರಶೇಖರನನ್ನು ಪೊಲೀಸ್ ವ್ಯಾನಿನಲ್ಲಿ ಪೊಲೀಸರ ಬಂದೂಬಸ್ತ್‌ನಲ್ಲಿ ಕರೆದುಕೊಂಡು ಬಂದ. ಅಲ್ಲಿ ಜನ ಸೇರುವುದಕ್ಕಿಂತ ಮುಂಚೆಯೇ ಆರೋಪಿಯನ್ನು ಶಶಿರೇಖಾ ಕೊಲೆಯಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಆತನ ಹೇಳಿಕೆಯನ್ನು ಪಡೆದುಕೊಂಡು ಮುಂದಿನ ಕಾರ್ಯಕ್ಕೆ ಅಣಿಯಾಬೇಕೆಂಬ ಹಿರಿಯ ಅಧಿಕಾರಿಗಳ ಆದೇಶದಂತೆ ಆತ ಆ ಕಾರ್ಯವನ್ನು ಬೇಗನೆ ಮುಗಿಸಬೇಕಾಗಿತ್ತು. ಆದರೆ, ಆರೋಪಿ ಚಂದ್ರಶೇಖರ ಸಿಕ್ಕಿದ್ದಾನೆಂದು ತಿಳಿದು ಕೂಡಲೆ ಸಾಕಷ್ಟು ಜನ ಸರ್ಕಲ್ ಸುತ್ತ ತುಂಬಿದ್ದರು. ಅವರನ್ನು ನಿಯಂತ್ರಿಸುವುದು ಪೊಲೀಸರಿಗೆ ಕಷ್ಟವಾಗಿತ್ತು. ಆ ಜನಗಳ ಮಧ್ಯೆ ಇನ್ನಿಬ್ಬರು ವ್ಯಕ್ತಿಗಳು ಅತ್ತಿಂದತ್ತ, ಇತ್ತಿಂದತ್ತ ಓಡಾಡುತ್ತಿದ್ದರು. ಪೊಲೀಸರ ಕೈಯಿಂದ ಚಂದ್ರಶೇಖರನನ್ನು ಹೇಗಾದರೂ ಪರಾರಿ ಮಾಡಲು ಸಾಧ್ಯವೇ ಎಂದು ಅವರು ಹವಣಿಸುತ್ತಿದ್ದರು.

ಅತ್ತ ಈ ವಿಷಯ ಗೊತ್ತಿಲ್ಲದೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಪ್ರತಿಭಟನಾಕಾರರ ಘೋಷಣೆಗಳು ಮುಗಿಲು ಮುಟ್ಟುವಂತೆ ಕೇಳುತ್ತಿದ್ದವು. ಸರ್ಕಲ್ ಒಳಗಡೆಯ ಪ್ರತಿಮೆಯ ಮುಂದಿನ ಗಾರ್ಡನ್‌ದಲ್ಲಿ ಕೊಲೆಯಾದ ಸ್ಥಳ ಮತ್ತು ಇತರ ಮಾಹಿತಿಯನ್ನು ಆರೋಪಿಯಿಂದ ಪಡೆಯುತ್ತಿದ್ದ ಸುಭಾಷನ ಪಕ್ಕದಲ್ಲಿದ್ದ ಚಂದ್ರಶೇಖರನಿಗೆ ಅವರಿಬ್ಬರೂ ಏನೋ ಸಂಜ್ಞೆ ಮಾಡಿದರು. ಅಷ್ಟರಲ್ಲಿಯೇ ಚಂದ್ರಶೇಖರನು ಸುಭಾಷನ ರಿವಾಲ್ವರನ್ನು ಕಸಿದುಕೊಂಡು ಅವನಿಗೆ ರಿವಾಲ್ವರನ್ನು ತೋರಿಸುತ್ತಾ, 'ಯಾರಾದ್ರೂ ಹತ್ರ ಬಂದ್ರ ಈ ಗುಂಡಿನಿಂದ ಸುಟ್ಟ ಹಾಕ್ತಿನಿ. ಸರಿರಿ ದೂರ..' ಎಂದಾಗ ದೂರದಲ್ಲಿದ್ದ ಅವರಿಬ್ಬರೂ ಓಡಿ ಬಂದು ಇವನ ಜೊತೆಯಾದರು. ಯಾವಾಗ ಅವರು ಇವನ ಜೊತೆ ಸೇರಿದರೋ ಆಗ ಎಲ್ಲರಿಗೂ ರಿವಾಲ್ವರ್ ತೋರಿಸುತ್ತಾ ಓಡಲು ಪ್ರಾರಂಭಿಸಿದರು. ಅಷ್ಟರಲ್ಲಿ ಪೊಲೀಸನೊಬ್ಬ ಅವರನ್ನು ತಡೆಗಟ್ಟಲು ಪ್ರಯತ್ನಿಸಿದಾಗ ಅವನಿಗೆ ಚಂದ್ರಶೇಖರ ಗುಂಡು ಹಾರಿಸಿದ. ಆತ ಅಲ್ಲಿಯೇ ನರಳುತ್ತ ಬಿದ್ದ. ಕೆಲವೇ ಕ್ಷಣಗಳಲ್ಲಿ ನಡೆದ ಈ ಘಟನೆಗಳಿಂದ ಸುಭಾಷನಿಗೆ ಎಲ್ಲವೂ ಅಯೋಮಯವಾಗಿತ್ತು. ಅಷ್ಟರಲ್ಲಿಯೇ ಪ್ರತಾಪ್‌ಮೋಹನ್ ಪ್ರತಿಮೆ ಕಡೆಯಿಂದ,'ಡೋಂಟ್ ರನ್, ಸ್ಟಾಪ್... ಯಾರೂ ತಪ್ಪಿಸಿಕೊಂಡು ಓಡಬೇಡಿ. ಅದರ್‌ವೈಸ್ ವಿ ವಿಲ್ ಶೂಟ್ ಯೂ ಆಲ್' ಎಂಬ ಧ್ವನಿಯನ್ನು ಕೇಳಿಯೂ ಅವರು ನಿಲ್ಲದೆ ಓಡ ಹತ್ತಿದರು. ಅಲ್ಲಿ ನಿಂತಿದ್ದ ಎಲ್ಲರೂ ಆ ಧ್ವನಿ ಬಂದತ್ತ ನೋಡಿದಾಗ ಅಲ್ಲಿ ಒಬ್ಬ ತರುಣ ಯೋಧನ ರಿವಾಲ್ವರ್‌ನಿಂದ ಸಿಡಿದಂಥ ಗುಂಡು ಕ್ಷಣಾರ್ಧದಲ್ಲಿಯೇ ಚಂದ್ರಶೇಖರನ ಎದೆ ಸೀಳಿದರೆ, ತರುಣ ಯೋಧನ ಪಕ್ಕದ ಪೊಲೀಸ್ ಅಧಿಕಾರಿಗಳ ರಿವಾಲ್ವರ್‌ಗಳಿಂದ ಬಂದಂತಹ ಗುಂಡುಗಳು ಒಂದು ವಿಜಯನನ್ನು, ಮತ್ತೊಂದು ಗುಂಡು ಗೋಪಾಲನನ್ನು ನೆಲಕ್ಕುರುಳಿಸಿದ್ದವು. ಆ ಗುಂಡಿನ ಸದ್ದು ಕೇಳಿ ನಿಂತಿದ್ದ ಜನರೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡಿ ಹೋಗಿ ಏನು ನಡೆಯುತ್ತಿದೆಯೆಂದು ತಿಳಿಯದೆ ಎಲ್ಲರೂ ಗಾಬರಿಯಾಗಿದ್ದರು. ಎಲ್ಲರ ದೃಷ್ಟಿ ಪ್ರತಾಪ್‌ಮೋಹನ್ ಪ್ರತಿಮೆಯತ್ತಲೇ ಇತ್ತು.

ಆಗ ಪ್ರತಿಮೆಯ ಹಿಂದಿನ ಅರಳಿಮರದ ಕಟ್ಟೆಯ ಮೇಲಿಂದ ತರುಣ ಯೋಧ ಹಾಗೂ ಅವನ ಜೊತೆ ಇಬ್ಬರು ಪೊಲೀಸ್ ಅಧಿಕಾರಿಗಳು ಕೈಯಲ್ಲಿ ರಿವಾಲ್ವರ್ ಹಿಡಿದು ಸುಭಾಷನ ಹತ್ತಿರ ಬರತೊಡಗಿದರು. ಅತ್ತ ಗುಂಡಿನ ಶಬ್ದ ಕೇಳಿ ಅನತಿ ದೂರದಲ್ಲಿನ ಜಿಲ್ಲಾಧಿಕಾರಿ ಕಚೇರಿಯಿಂದ ಜಗದೀಶ ಸೇರಿದಂತೆ ಪ್ರತಿಭಟನಾಕಾರರೆಲ್ಲರೂ ಈ ಘಟನಾ ಸ್ಥಳಕ್ಕೆ ಬಂದರು. ಅಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನು ಸೇರಿದ್ದ ಎಲ್ಲ ಜನರೂ ಆಶ್ಚರ್ಯದಿಂದ ನೋಡುತ್ತಿದ್ದರು.

ಆ ಯೋಧ ಸುಭಾಷನಿಗೆ ಹತ್ತಿರವಾದಂತೆ 'ಭರತ ನೀನಾ..ಏನಿದೆಲ್ಲಾ..?'

'ಹೌದು, ನಾನೇ ನಿನ್ನ ಗೆಳೆಯ, ಸುಭಾಷ ದಯವಿಟ್ಟು ಕ್ಷಮಿಸು, ನಿಮ್ಮ ಸಿಬ್ಬಂದಿ ಉಳಸಾಕ ಆಗಲಿಲ್ಲ ನಮಗ,